## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ

## ಸಿಸಿ ನಂ.904/2022

**ಫಿರ್ಯಾದಿಃ**
ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ

**-ಃ ವಿರುದ್ದ ಃ-**

**ಆರೋಪಿ/ತರುಃ**

1. ಗಡ್ಡೆಪ್ಪ ಮಣೂರೆ ತಂದೆ ಚನ್ನಪ್ಪ ಮಣೂರೆ,
33 ವರ್ಷ, ಉಃ ಡ್ರೈವರ ಕೆಲಸ,
ವಾಸಃ ನಾಗಣಸೂರ ಗ್ರಾಮ, ತಾಃ ಅಕ್ಕಲಕೋಟ,
ಜಿಃ ಕಲಬುರಗಿ.

2. ಹುಸೇನಬಾಷಾ ಡಾಂಗೆ ತಂದೆ ಮಹ್ಮದಹನೀಪ ಡಾಂಗೆ,
29 ವರ್ಷ, ಉಃ ಕಾರ ಚಾಲಕ,
ವಾಸಃ ಮಣೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

## ಆಪಾದನೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ಮೊದಲನೇಯದಾಗಿ ದಿನಾಂಕ 17.10.2021 ರಂದು ಸಾಯಂಕಾಲ 06-30 ಗಂಟೆಯ ಸುಮಾರಿಗೆ ಅಫಜಲಪೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ 2ನೇ ಆರೋಪಿತನಾದ ನೀವು ಚಾಸಾ-9 ಮತ್ತು 10 ರವರ ಮಗನಾದ ಮೃತ ಬಿಲಾಲ ತಂದೆ ಮಹಿಮೂದಸಾಬ ಡಾಂಗೆ ರವರು ಚಾಸಾ-13 ಕುತುಬೋದ್ದಿನ್ ರವರ ಬಾಬ್ತು ಎಂಹೆಚ್-13/ಡಿಎಲ್-5224 ನೇದ್ದರ ಮೋಟಾರ ಸೈಕಲ ಮೇಲೆ ತನ್ನ ಹಿಂದಿನ ಸೀಟಿನಲ್ಲಿ ಕುಡಿಸಿಕೊಂಡು ಮೋಟಾರ್ ಸೈಕಲ ಚಲಾಯಿಸುತ್ತ ಹೊಸೂರ ಗ್ರಾಮದಿಂದ ಮಣೂರ ಗ್ರಾಮಕ್ಕೆ ಹೊರಟಿದ್ದು, 1ನೇ ಆರೋಪಿತನಾದ ನೀವು ಚಾಸಾ-6 ಬಸವರಾಜ ರವರ ಬಾಬ್ತು ಎಂಹೆಚ್-13/ಡಿಎಫ್-6876 ನೇದ್ದರ ಮೋಟಾರ್ ಸೈಕಲ ಮೇಲೆ ತನ್ನ ಹಿಂದಿನ ಸಿಟ್ಟಿನಲ್ಲಿ ಚಾಸಾ-6 ಬಸವರಾಜ ರವರಿಗೆ ಕೂಡಿಸಿಕೊಂಡು ಮೋಟಾರ ಸೈಕಲ ಚಲಾಯಿಸಿಕೊಂಡು ಮಣೂರ ಗ್ರಾಮದ ಕಡೆಯಿಂದ ನಾಗಣಸೂರ ಗ್ರಾಮಕ್ಕೆ ಹೊರಟಿದ್ದು, ಮಣೂರ-ಹೊಸೂರ ರೋಡಿಗೆ ಸದಪ್ಪ @ ಸದಾಶಿವ ನಿವರ್ಗಿ ರವರ ಹೊಲದ ಹತ್ತಿರ 1 ಮತ್ತು 2ನೇ ಆರೋಪಿತರಾದ ನೀವು

ಮೋಟಾರ ಸೈಕಲಗಳನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಎರಡೂ ಮೋಟಾರ ಸೈಕಲಗಳು ಪರಸ್ಪರ ಮುಖಾ ಮುಖಿ ಡಿಕ್ಕಿ ಹೊಡೆಸಿ ಅಪಘಾತಕ್ಕಿಡಾಗಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೇಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವು ಮೋಟಾರ ಸೈಕಲಗಳನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಎರಡೂ ಮೋಟಾರ ಸೈಕಲಗಳು ಪರಸ್ಪರ ಮುಖಾ ಮುಖಿ ಡಿಕ್ಕಿ ಹೊಡೆಸಿ ಅಪಘಾತಕ್ಕಿಡಾಗಿದ ಪರಿಣಾಮ ಸದರಿ ಘಟನೆಯಲ್ಲಿ ಮೃತ ಬಿಲಾಲನ ತಲೆಗೆ ಭಾರಿ ರಕ್ತಗಾಯ ಮತ್ತು ಹೊಟ್ಟೆಗೆ ಒಳಪೆಟ್ಟಾಗಿದ್ದರಿಂದ ಅವನಿಗೆ ಚಾಸಾ-3 ಮತ್ತು 7 ರವರು ಒಂದು ಖಾಸಗಿ ಕಾರಿನಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ಸೋಲಾಪೂರದ ಕಾಟೇಕರ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದ್ದು, ಚಿಕಿತ್ಸೆ ಫಲಿಸದೇ ದಿನಾಂಕಃ 17.10.2021 ರಂದೇ ರಾತ್ರಿ 10-50 ಗಂಟೆ ಸುಮಾರಿಗೆ ಮೃತಪಡಲು ಕಾರಣರಾಗಿದ್ದು, ಆ ಮೂಲಕ ಭಾ.ದಂ.ಸಂ. ಕಲಂ.304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೇಯದಾಗಿ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರಾದ ನೀವು ಮೋಟಾರ ಸೈಕಲಗಳನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಎರಡೂ ಮೋಟಾರ ಸೈಕಲಗಳು ಪರಸ್ಪರ ಮುಖಾ ಮುಖಿ ಡಿಕ್ಕಿ ಹೊಡೆಸಿ ಅಪಘಾತಕ್ಕಿಡಾಗಿದ ಪರಿಣಾಮ ಸದರಿ ಘಟನೆಯಲ್ಲಿ ಚಾಸಾ-6 ಬಸವರಾಜರವರಿಗೆ ಮುಖಕ್ಕೆ ಮತ್ತು ತಲೆ ಹಾಗೂ ಮೈಕೈಗಳಿಗೆ ಭಾರಿ ರಕ್ತಗಾಯ ಮತ್ತು ಒಳ ಪೆಟ್ಟುಗಳಾಗಲು ಕಾರಣರಾಗಿದ್ದು, ಆ ಮೂಲಕ ಭಾ.ದಂ.ಸಂ. ಕಲಂ.338 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

## <u>ಆರೋಪಿತರ ಹೇಳಿಕೆಗಳು</u>

ಪ್ರಃ-1)ಮೇಲ್ಕಾಣಿಸಿದ ಆರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಡಿಕೊಂಡಿದ್ದೀರಾ?

ಉತ್ತರಃ-1ನೇ ಆರೋಪಿಃ

2ನೇ ಆರೋಪಿಃ

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-1ನೇ ಆರೋಪಿಃ

2ನೇ ಆರೋಪಿಃ

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ದಿನಾಂಕ 19.11.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.